ಕರ್ನಾಟಕ ವಿಧಾನ ಸಭೆ

ಬುಧವಾರ 30ನೇ ಜುಲೈ 1997 ರಂದು

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ

ಸಭಾಂಗಣದಲ್ಲಿ ಮಧ್ಯಾಹ್ನ 5-30 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು : **(ಶ್ರೀ ರಮೇಶ್ ಕುಮಾರ್)** ಅವರ ಪೀಠವನ್ನು ಅಲಂಕರಿಸಿದ್ದರು.

ವಿಷಯ : ವಿದ್ಯುತ್ ದರ ಏರಿಕೆ ವಿರುದ್ಧ ವಿರೋಧ ಪಕ್ಷದ ಸದಸ್ಯರುಗಳಿಂದ ಧರಣಿ

ಅಧ್ಯಕ್ಷರು : ಏನೂ ಪರಿಹಾರ ಕಾಣಲಿಲ್ಲ ಏನು ಮಾಡೋಣ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ ನಮ್ಮದು ಎರಡೇ ಪಾಯಿಂಟ್ ಒಂದು ಜಾಯಿಂಟ್ ಹೌಸ್ ಕಮಿಟಿ ಮಾಡಿ. ಎರನೆಯದು ಈ ನೋಟಿಫಿಕೇಷನ್ ಅನ್ನು ಅಬೇಯನ್ಸ್‌ನಲ್ಲಿ ಡಿ ಅಥವಾ ವಿಥ್‌ಡ್ರಾ ಮಾಡಿ. ಇದರಲ್ಲಿ ಏನು ತಪ್ಪಿದೆ.

ಅಧ್ಯಕ್ಷರು : ಐ. ಎಂ. ಜಯರಾಮಶೆಟ್ಟಿಯವರೇ, ತಾವು ನಿನ್ನೆ ಇರಲಿಲ್ಲ ಅನಿಸುತ್ತದೆ.

ಶ್ರೀ ಐ. ಎಂ. ಜಯರಾಮಶೆಟ್ಟಿ : ಮಾಹಿತಿಯನ್ನು ತರುವುದಕ್ಕೆ ಹೋಗಿದ್ದೆ.

ಅಧ್ಯಕ್ಷರು : ಅದಕ್ಕೆ ಇಷ್ಟೆಲ್ಲಾ ಗದ್ದಲ ಆಗಿದ್ದು.

ಶ್ರೀ ವಾಟಾಳ್ ನಾಗರಾಜ್ : ಆಡಳಿತ ಪಕ್ಷದ ಬಹುತೇಕ ಜನ ನಮಗೆ ಬೆಂಬಲ ನೀಡಿ ಸಭಾತ್ಯಾಗ ಮಾಡಿದ ಹಾಗೆ ಕಾಣುತ್ತದೆ.

ಅಧ್ಯಕ್ಷರು : ಯಾರು ಆಡಳಿತದವರೋ, ಯಾರು ವಿರೋಧಪಕ್ಷದವರೊ ನನಗೆ ಗೊತ್ತಾಗುವುದಿಲ್ಲ. ನೀವು ಗೈಡ್ ಮಾಡಿದರೆ ಗೊತ್ತಾಗುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಯಾವುದೋ ಒಂದು ಸಭೆಯಲ್ಲಿದ್ದಾರೆ. ನಾವು ನಮ್ಮ ಪ್ರಾಮಾಣಿಕ ಪ್ರಯತ್ನವನ್ನು ಮಾಡಿದ್ದೇವೆ. ನಾನಂತೂ ಆಶಾವಾದಿ ಇನ್ನೂ ನನ್ನ ಪ್ರಯತ್ನವನ್ನು ಮುಂದುವರಿಸಲಿದ್ದೇನೆ. ಈಗಾಗಲೇ ಸಾಕಷ್ಟು ಸಮಯ ಆಗಿರುವುದರಿಂದ ನಾವು ಮತ್ತೆ ಮಾತುಕತೆ ಮುದುವರೆಸಿ ಕೂತುಕೊಳ್ಳುವುದಕ್ಕೆ ಆಗುವುದಿಲ್ಲ. ಆದಕಾರಣ ನಾನು ಸಭೆಯನ್ನು ಮುಂದಕ್ಕೆ ಹಾಕುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ : ನಾವು ಇಡೀ ರಾತ್ರಿ ಇಲ್ಲಿ ಧರಣಿ ಕುಳಿತುಕೊಳ್ಳಬೇಕಾಗುತ್ತದೆ. ಮೊಂಡ ಸರ್ಕಾರದ ನಡವಳಿಕೆ ಏನೆಂದು ರಾಜ್ಯದ ಜನರಿಗೆ

ಗೊತ್ತಾಗದೆ ಇದು ಇತಿಹಾಸದಲ್ಲಿ ಸೇರಿಕೊಳ್ಳಲಿ. ನಿನ್ನೆ ತಾವು ಬಂದು ಹೇಳಿದಾಗ ಸಮಸ್ಯೆ ಬಗೆಹರಿಯಬಹುದು ಎಂದು ನಾವು ಧರಣಿಯನ್ನು ಹಿಂತೆಗೆದುಕೊಂಡಿದ್ದೇವೆ. ಇದರಿಂದ ನೇಗಿಲು ಹೊತ್ತವನು, ನಾಟಿ ಮಾಡುವವನು ನೆಗೆದು ಬಿದ್ದು ಹೋಗುತ್ತಾರೆ, ಇಂಡಸ್ಟ್ರೀಸ್ ಬಾಗಿಲು ಹಾಕುತ್ತಾರೆ, ಕಾರ್ಮಿಕರು ಬೀದಿ ಪಾಲಾಗುತ್ತಾರೆ.

ಶ್ರೀ ಎಂ. ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು) : ಯಾವುದೇ ಪ್ರತಿಷ್ಠೆಯ ಮೇಲೆ ಇಲ್ಲ. ಬೆಳಿಗ್ಗೆಯಿಂದ ಸರ್ಕಾರ ಎಲ್ಲಾ ಹಿರಿಯರ ಜೊತೆ ಸಮಾಲೋಚನೆ ಮಾಡಿದೆ. ವ್ಯವಸಾಯಗಾರರ ವಿಚಾರವೇ ಆಗಿರಲಿ, ಡೊಮೆಸ್ಟಿಕ್ ಸರ್ವಿಸ್ ವಿಚಾರವೇ ಆಗಿರಲಿ ಅಥವಾ ಭಾಗ್ಯ ಜ್ಯೋತಿ ವಿಚಾರರೇ ಆಗಿರಲಿ ಅವರೆಲ್ಲರೂ ಚರ್ಚೆಯಲ್ಲಿ ಭಾಗವಹಿಸಿ ಮಾಡತಕ್ಕಂಥ ಸಲಹೆಗಳನ್ನು ಪರಿಶೀಲಿಸಿ ಒಂದು ಒಪ್ಪಂದಕ್ಕೆ ಬರೋಣ ಮತ್ತು ಈಗಾಗಲೇ ನಾವು ಮಾಡಿರತಕ್ಕಂಥ ಅಧಿಸೂಚನೆ ಏನು ಇದೆ ಅದರಲ್ಲಿ ಕೆಲವು ಮಾರ್ಪಾಡುಗಳನ್ನು ಮಾಡಿಕೊಳ್ಳಲು ಸಹ ನಾವು ತಯಾರಿದ್ದೇವೆ ಎನ್ನತಕ್ಕಂಥ ಮಾತನ್ನು ಸ್ಪಷ್ಟಪಡಿಸಿದ್ದೇವೆ. ಅದೂ ಅಲ್ಲದೆ ಮೇಲ್ಮನೆಯ ಹಾಗೂ ಇಲ್ಲಿ ಇರತಕ್ಕಂಥ ಎಲ್ಲಾ ಪಕ್ಷಗಳ ಮುಖಂಡರು ಯಾರು ಇದ್ದಾರೆ ಅವರೆಲ್ಲರನ್ನು ಕರೆದು ಮಾತನಾಡುತ್ತೇವೆ. ಅದೇ ಕಮೀಟಿ ಮೂರು ದಿವಸಕ್ಕೆ ಅಥವಾ ಏಳು ದಿವಸಕ್ಕೆ ತಮ್ಮ ಅಭಿಪ್ರಾಯವನ್ನು ವ್ಯಕ್ತ ಮಾಡುವ ಹಾಗೆ ಅದರ ಜೊತೆ ಕೂಡ ಮಾತನಾಡುತ್ತೇವೆ ಎಂದು ಸನ್ಮಾನ್ಯ ಮುಖ್ಯಮಂತ್ರಿಗಳು ಹೇಳಿರುವುದರಿಂದ ಇದರ ಬಗ್ಗೆ ಸರ್ಕಾರದ ಪರವಾಗಿ ಯಾವುದೇ ರೀತಿಯಾದ ಪ್ರತಿಷ್ಠೆ ಇಲ್ಲ. ತಾವು ಕೂಡ ಪ್ರಯತ್ನವನ್ನು ಮಾಡಿದ್ದೀರಿ. ಮತ್ತೆ ನಾಳೆ ಕೂಡ ಈ ವಿಚಾರದಲ್ಲಿ ಯಾರಾದರೂ ಹಿರಿಯರು ಮಾತನಾಡುವುದಿದ್ದರೆ ಮಾತನಾಡಲಿ, ಇದರಲ್ಲಿ ಮೊಂಡುತನದ ಪ್ರಶ್ನೆ ಏನೂ ಇಲ್ಲ. ನಿಮಗೆ ಎಷ್ಟರ ಮಟ್ಟಿಗೆ ಜನಸಾಮಾನ್ಯರ ಬಗ್ಗೆ ಕಾಳಜಿ ಇದೆ. ಅಷ್ಟರ ಮಟ್ಟಿಗೆ ನಮಗೂ ಕೂಡ ಕಾಳಜಿ ಇದೆ. ಆದುದರಿಂದ ತಾವು ದಯವಿಟ್ಟು ಸಹಕರಿಸಬೇಕು. ಕೆಲವು ಹಿರಿಯರು ಮತ್ತೆ ಕೆಲವು ವಿಚಾರಗಳನ್ನು ಮಾತನಾಡುವುದಾದರೆ ನಾಳೆ ಮಾತನಾಡಲಿ ಅದಕ್ಕೆ ಮಾನ್ಯ ಅಧ್ಯಕ್ಷರು ಕೂಡ ತಮ್ಮ ಸಹಕಾರವನ್ನು ಕೊಡುತ್ತಾರೆ. ತಾವು ರಾತ್ರಿಯೆಲ್ಲಾ ಇಲ್ಲಿ ಕುಳಿತುಕೊಂಡು ಧರಣಿ ಮಾಡಿ ತಮಗೆಲ್ಲರಿಗೂ ತೊಂದರೆ ಕೊಡತಕ್ಕಂಥ ಉದ್ದೇಶ ನಮಗೆ ಇಲ್ಲ. ಸದನವನ್ನು ಸರಿಯಾಗಿ ನಡೆಸಿಕೊಂಡು ಹೋಗಬೇಕು ಎನ್ನತಕ್ಕಂಥ ಉದ್ದೇಶವೇ ಸರ್ಕಾರಕ್ಕೆ ಇದೆ.

ಅಧ್ಯಕ್ಷರು : ನಿನ್ನೆ ನಾನು ಬಂದು ತಮಗೆಲ್ಲಾ ವಿನಂತಿ ಮಾಡಿಕೊಂಡ ತಕ್ಷಣ ತಾವೆಲ್ಲಾ ನನ್ನ ಮಾತಿಗೆ ಬೆಲೆ ಕೊಟ್ಟು ಇವೊತ್ತು ಮತ್ತೆ ಸೇರೋಣ ಎಂದುಹೇಳಿ ತಾವು ಧರಣಿಯನ್ನು ಮುಂದುವರಿಸದೆ ಹಿಂತೆಗೆದುಕೊಂಡಿದ್ದೀರಿ. ಆ ವಿಚಾರಕ್ಕೆ ನಾನು ತಮಗೆ ಆಭಾರಿಯಾಗಿದ್ದೇನೆ.

ಇಂತಹ ಒಂದು ಜಿಜ್ಞಾಸೆ ಬಂದಾಗ ಅವರವರ ಹಕ್ಕನ್ನು ವರ್ಜಿತ ಮಾಡತಕ್ಕಂಥ ಸ್ವಾತಂತ್ರ್ಯ ನಿಮಗೆ ಇರುತ್ತದೆ. ನಾನು ನನ್ನ ಇತಿಮಿತಿಯನ್ನು ಧಾಟಿ ನೀವು ಯಾರು ಯಾರು ಏನೇನು ಮಾಡಬೇಕು ಎಂದು ಹೇಳುವುದಕ್ಕೆ ಅಥವಾ ಕೈ ಹಾಕುವುದಕ್ಕೆ ನಾನು ಹೋಗುವುದಿಲ್ಲ. ಸರ್ಕಾರದ ಪರವಾಗಿ ಅವರೊಂದು ಮಾತನ್ನು ಹೇಳಿದ್ದಾರೆ. ಈಗ ಮಾನ್ಯ ಮುಖ್ಯಮಂತ್ರಿಗಳೂ ಕೂಡ ಬಂದಿದ್ದಾರೆ. ಕೊನೆಯದಾಗಿ, ಅವರು ಏನು ಹೇಳುತ್ತಾರೆ ನೋಡೋಣ. ನಮ್ಮ ಗೆಳೆಯರು ಮತ್ತು ಮಾನ್ಯ ವಿರೋಧ ಪಕ್ಷದ ಸ್ನೇಹಿತರು ಏನು ಹೀಗಾಯಿತು, ಏನೂ ಇತ್ಯರ್ಥ ಆಗಲಿಲ್ಲ ಎಂದಿದ್ದಕ್ಕೆ ನಾಳೆ ಮಾತುಕತೆ ಮಾಡೋಣ ಎಂದು ನಾನು ಹೇಳಿದ್ದೆ. ಅದಕ್ಕೆ ಅವರು ಇಲ್ಲ ನಾವು ಇಡೀ ದಿವಸ ಇಲ್ಲಿ ಧರಣಿ ಮುಂದುವರೆಸುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳಿದರು. ಅದಕ್ಕೆ ಪ್ರತಿಯಾಗಿ ಸರ್ಕಾರದ ಪರವಾಗಿ ಮಾನ್ಯ ಎಂ.ಪಿ. ಪ್ರಕಾಶ್‌ರವರು ಜನಪರವಾದ ಕಾಳಜಿ ನಮಗೂ ಕೂಡ ಇದೆ. ಏನೋ ಒಂದು ಕಾರಣಕ್ಕೆ ಮಾತನಾಡುವುದು ಆಗಲಿಲ್ಲ ನಾಳೆ ಕೂತು ಮಾತನಾಡೋಣ ಎಂದು ಹೇಳಿದ್ದಾರೆ. ಅಷ್ಟರಲ್ಲಿ ತಾವು ಬಂದಿದ್ದೀರಿ. ಇವೊತ್ತೇನೂ ಕಲಾಪ ನಡೆಸುವುದಕ್ಕೆ ಸಾಧ್ಯವಿಲ್ಲ. ಈಗಾಗಲೇ ಐದೂವರೆ ಗಂಟೆಯಾಗಿದೆ. ಈಗ ಗಂಟೆ ಬಾರಿಸಿದ ಉದ್ದೇಶ ನಾಳೆ ಸೇರೋಣ ಎಂದು ಹೇಳಿ ಅನೌನ್ಸ್ ಮಾಡೋಣ ಎಂದು ಇತ್ತು. ಅದರ ಮಧ್ಯೆ ತಾವು ಬಂದಿದ್ದೀರಿ try to solve the crisis. I shall be happy personally as speaker.

+ ಶ್ರೀ ಜೆ. ಹೆಚ್. ಪಟೇಲ್ (ಮುಖ್ಯಮಂತ್ರಿಗಳು) : ಸನ್ಮಾನ್ಯ ಅಧ್ಯಕ್ಷರೆ, ಈ ವಿದ್ಯುತ್ ದರದ ಏರಿಕೆಗಳ ಬಗ್ಗೆ ನನ್ನೆ ಚರ್ಚೆಯಾಗಿ ವಿರೋಧ ಪಕ್ಷದ ನಾಯಕರಿಗೆ ಹಾಗೂ ಎಲ್ಲಾ ವಿರೋಧ ಪಕ್ಷದ ಸದಸ್ಯರಿಗೆ ಇದ್ದ ಸ್ಥಿತಿಯನ್ನು ಮನಮುಟ್ಟುವಂತೆ ವಿವರಿಸಿದ್ದೇವೆ. ಅವರು ಕೆಲವೊಂದು ಐಟಂಗಳಲ್ಲಿ ಇದು ಜಾಸ್ತಿಯಾಗಿದೆ, ಸಾಮಾನ್ಯ ಜನರಿಗೆ, ಮಧ್ಯಮ ವರ್ಗದ ಜನರಿಗೆ ಇದು ಬಹಳ ಜಾಸ್ತಿಯಾಗಿದೆ, ತೀರಾ ಬಡವರಿಂದ ಭಾಗ್ಯ ಜ್ಯೋತಿ ಸ್ಕೀಮದಿಂದ ಅಂತಹ ಆದಾಯ ಏನೂ ಇಲ್ಲ. ಆದ್ದರಿಂದ ಅದನ್ನು ಏಕೆ ಜಾಸ್ತಿ ಮಾಡಬೇಕು. ಎಂದು ಹೇಳಿದಾಗ ಮಾನ್ಯ ಖರ್ಗೆಯವರು, ಮಾನ್ಯ ಯಡಿಯೂರಪ್ಪನವರು, ಮಾನ್ಯ ನಂಜೇಗೌಡರು, ಮಾನ್ಯ ವಾಟಾಳ್‌ರು ಹೇಳಿದಾಗ ನಾನು ಸರಿ ಅಂದೆ. ಆದರೆ ಎಲ್‌ಟಿ ಹೆಚ್‌ಟಿ ಇಂಡಸ್ಟ್ರೀಸ್ ಬಗ್ಗೆ ನಾವು ಸಂಬಂಧಪಟ್ಟವರನ್ನು ಕರೆದು ಮಾತನಾಡಿ ಇದು ನಿವಾರ್ಯ ಎಂದು ಹೇಳಿ ಮಾಡಿದ್ದೇವೆ. ಇನ್ನು ಡೊಮೆಸ್ಟಿಕ್ ಲೈಟಿಂಗ್ ಮತ್ತು ಎ.ಇ.ಹೆಚ್.ನಲ್ಲಿ ಸ್ವಲ್ಪ ಹೆಚ್ಚು ವ್ಯತ್ಯಾಸ ಕಾಣಿಸಿಕೊಳ್ಳುತ್ತದೆ. ಅದರ ಬಗ್ಗೆ ತಾವು ಸ್ವಲ್ಪ ಚರ್ಚೆ ಮಾಡಿದ್ದೀರಿ. ತೀರ ಬಡವರ ಬಗ್ಗೆ ಮತ್ತು ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್ ಬಗ್ಗೆ

ಕಳಕಳಿ ನಮಗೂ ಜಾಸ್ತಿ ಇದೆ. ಇವರು ಮತ್ತೆ ಹೌಸ್ ಕಮಿಟಿ ಎಂದು ಹೇಳುತ್ತಾರೆ. ಉಭಯ ಸದನದ ಎಲ್ಲಾ ಪಕ್ಷದ ಮುಖಂಡರು ಸೇರಿಸಿ ತೀರ್ಮಾನ ಮಾಡಿದರೆ ಆಯಿತು. ಅದಕ್ಕೆ ಹೌಸ್ ಕಮಿಟಿ ಏತಕ್ಕೆ ಬೇಕು? ಹೌಸ್ ಕಮಿಟಿ, ಹೌಸ್ ಕಮಿಟಿ ಎಂದು ಇದೊಂದು ಸಾದಾರಣ ಬೇಡಿಕೆಯಾಗಿದೆ. ಮಾನ್ಯ ಅಧ್ಯಕ್ಷರೆ, ಹೌಸ್ ಕಮಿಟಿ ಮಾಡುವುದು ಬಿಡುವುದು, ಅದರ ಸಂಪೂರ್ಣ ಅಧಿಕಾರ ನಿಮ್ಮದು. ಹೌಸ್ ಕಮಿಟಿಯ ಅವಶ್ಯಕತೆ ಸರ್ಕಾರಕ್ಕೆ ಕಾಣುವುದಿಲ್ಲ. ಇವೊತ್ತು ಬಡವರಿಗೆ, ಮಧ್ಯಮ ವರ್ಗದವರಿಗೆ ಹೆಚ್ಚು ಭಾರ ಆಗಿದೆ ಎಂದು ನಾವೇ ಒಪ್ಪಿಕೊಳ್ಳುವುದಕ್ಕೆ ತಯಾರಿದ್ದೇವೆ. ನಾವು ಕಡಿಮೆ ಮಾಡುವುದಕ್ಕೆ ತಯಾರಿದ್ದೇವೆ. ತಾವು ಹೇಳಿದರೂ ಮಾಡುತ್ತೇವೆ ಹೇಳದಿದ್ದರೂ ಮಾಡುತ್ತೇವೆ. ನೋಟಿಫಿಕೇಷನ್ ವಿಥ್‌ಡ್ರಾ ಮಾಡುವುದು ಇದೊಂದು ಎಕ್ಸ್‌ರ್‌ಸೈಸ್ ಆಗುತ್ತದೆಯೇ ಹೊರತು ಉದ್ದೇಶ ಸಫಲ ಆಗುವುದಿಲ್ಲ. ಕೆಲವು ಕನ್ಸಿಷನ್ಸ್ ಕೊಡಲು ನಮ್ಮ ಹಿರಿಯ ಸದಸ್ಯರುಗಳೆಲ್ಲಾ ಒಪ್ಪಿಕೊಂಡಿದ್ದಾರೆ. ಅದರ ಬಗ್ಗೆ ಬೇಕಾದರೆ ತಾವು ಪರ್ಮಿಷನ್ ಕೊಟ್ಟರೆ ಯಾವ ವಲಯದಲ್ಲಿ ಏನು ಕನ್ಸಿಷನ್ ಕೊಡುವುದಕ್ಕೆ ಸಾಧ್ಯ ಎಂದು ನೋಡಿ ಅವರು ಹೇಳಲಿ ಹೇಳದೇ ಇರಲಿ ನಾನು ಕನ್ಸಿಷನ್ ಕೊಡುತ್ತೇನೆ. ಆದರೆ ಮಾನ್ಯ ವಿರೋಧ ಪಕ್ಷದ ನಾಯಕರು ವಿನಾಕಾರಣ ನಾನು ಇಲ್ಲೇ ಕುಳಿತುಕೊಳ್ಳುತ್ತೇನೆ ಎಂದು ಹೇಳಿದರೆ ನಾನೇನು ಮಾಡಲಿ?

ಮಾನ್ಯ ಅಧ್ಯಕ್ಷರೆ ತಾವು ನೋಡಿದ್ದೀರಿ ಹೋದ ಸಾರಿ ನಾನು ಬೇರೆ ಸಹೋದ್ಯೋಗಿಗಳನ್ನು. ಹೌಸ್ ಕಮಿಟಿಗೆ ಒಪ್ಪಿಕೊಂಡಿದ್ದೆ. ವಿರೋಧಪಕ್ಷದ ಪೈಲವಾನ್‌ಗಿರಿಗೆ ಸರ್ಕಾರ ತಲೆ ತಗ್ಗಿ ಹೋಯಿತು ಎಂದು ಜನ ಹೇಳಿದರು. ನಾನು ಅಂತಹ ಪ್ರಚಾರ ಅಪಪ್ರಚಾರಗಳಿಗೆ ಹೋಗುವುದಿಲ್ಲ. ನ್ಯಾಯವಾಗಿ What is the genuine point that they have made, that I have accepted. I am prepared to accept, I am prepared to amend the Notification.

ಮಾನ್ಯ ಅಧ್ಯಕ್ಷರೇ ಈ ಐವತ್ತು ವರ್ಷಗಳ ಅವಧಿಯಲ್ಲಿತಾವು ಕೂಡ ಅನೇಕ ಸರ್ಕಾರಗಳನ್ನು ನೋಡಿದ್ದೀರಿ. ಇವರು ನೋಟಿಪಿಕೇಷನ್ ಇಶ್ಯೂ ಮಾಡುವುದು ಬೇಡ ಎಂದು ಹೇಳಿದ ತಕ್ಷಣ ನಾವು ವಾಪಸ್ಸು ತೆಗೆದುಕೊಳ್ಳುವುದನ್ನು ಮಾಡಬೇಕು? Can that be done?

ಬಿ.ಜೆ.ಪಿ. ಯವರನ್ನು ನಾನು ಅರ್ಥ ಮಾಡಿಕೊಳ್ಳಬಲ್ಲೆ. ಅವರು ಇಲ್ಲಿ ರಾಜ್ಯ ಆಳಲಿಲ್ಲ. ಬೇರೆ ಕಡೆ ರಾಜ್ಯವನ್ನಾಳಿದ್ದಾರೆ ಅದು ಬೇರೆ. ರಾಜಸ್ಥಾನದಲ್ಲಿ ಅವರ ಸರ್ಕಾರದ ರೇಟ್ಸ್ ಇವ್ಹೊತ್ತು ನಾನು ಕೋಟ್ ಮಾಡಿದರೆ ಅವರು ಅರ್ಥ ಮಾಡಿಕೊಂಡು ಒಪ್ಪಿಕೊಳ್ಳುತ್ತಾರೆ ಆದರೆ ಇವರು ಅಲ್ಪಿಕೆ ಮಾಡಿದವರು. ನೋಟಿಫಿಕೇಷನ್ ಹೇಗೆ ವಿಥ್‌ಡ್ರಾ ಮಾಡುವುದಕ್ಕಾಗುತ್ತದೆ? ಹಾಗೆ ಮಾಡುವುದಕ್ಕೆ ಅದೇನು ಸಿನೇಮಾ ಟಿಕೆಟ್ಟಾ? ಆದುದರಿಂದ, ನಾವು ಎಷ್ಟು ವಿನಂತಿ ಮಾಡಿಕೊಳ್ಳಬಹುದು, ಎಷ್ಟು ತಗ್ಗಿ ನಡೆಯಬೇಕು ಎಷ್ಟು ನಡೆದಿದ್ದೇನೆ. ಇಷ್ಟಾಗಿಯೂ ಅವರು ಧರಣಿ ಕುಳಿತುಕೊಂಡರೆ ಮಧ್ಯಮ ವರ್ಗದ ಬಗ್ಗೆ, ಬಡವರ ಬಗ್ಗೆ ನಮ್ಮ ಸರ್ಕಾರಕ್ಕೆ ಕಾಳಜಿ ಇದೆ ಆದರೆ ಅವರಿಗೆ ಇಂಡಸ್ಟ್ರೀಸ್ ಬಗ್ಗೆ ಕಾಳಜಿ ಇದೆ ಬಡವರ ಪರವಾಗಿ ನಾವು ಇದ್ದರೆ, ದೊಡ್ಡವರ ಪರವಾಗಿ ಅವರು ಇದ್ದಾರೆ ಎಂದು ನಾನು ಜನರಿಗೆ ಹೇಳುತ್ತೇನೆ. ನಾವು ನಿಮ್ಮ ಪರ ಇದ್ದರೆ ಅವರು ಬೇರೆಯವರ ಪರ ಇದ್ದಾರೆ ಆದ್ದರಿಂದ ನಾವೇನು ಮಾಡುವುದಕ್ಕೆ ಆಗುವುದಿಲ್ಲ ಎಂದು ಹೇಳುತ್ತೇನೆ. ಈ ನೋಟಿಫಿಕೇಷನ್ ವಿಥ್‌ಡ್ರಾ ಮಾಡುವುದಕ್ಕೆ ಆಗುವುದಿಲ್ಲ. ಈಗಲೂ ತಾವು ಹೇಳಿದರೆ ಉಭಯ ಸದನಗಳ ಎಲ್ಲಾ ಪಕ್ಷಗಳ ಮುಖಂಡರು ಕುಳಿತು ಮೂರು ದಿವಸದಲ್ಲೋ ನಾಲ್ಕು ದಿವಸದಲ್ಲೋ ಕುಳಿತುಕೊಂಡು ಮಾತನಾಡೋಣ. ನೀವು ಹೌಸ್ ಕಮಿಟಿ ಬೇಕು ಎಂದು ಏತಕ್ಕೆ ಕೇಳುತ್ತಿದ್ದೀರೋ ನನಗೆ ಅರ್ಥವಾಗುತ್ತಿಲ್ಲ. ಯಾವ ಹೌಸ್? ನಾವೆಲ್ಲಾ ಅಲ್ಲವೇ? ಆದಕಾರಣ ಉಭಯ ಸದನಗಳ ಎಲ್ಲಾ ಪಕ್ಷಗಳ ಮುಖಂಡರನ್ನು ಕರೆಯೋಣ, ಈ ಗುರುತು ಚೀಟಿ ಹಚ್ಚುವುದು ಬೇಡ. If you are really interested in solving the problem, please co-operate. ಇದನ್ನೆ ನಾವು ಮಾಡಿಕೊಳ್ಳುತ್ತೇವೆ ಎಂದರೆ ನನ್ನದೇನೂ ಅಭ್ಯಂತರ ಇಲ್ಲ. ನಾನು ಯಡಿಯೂರಪ್ಪನವರಿಗೆ ನಂಜೇಗೌಡರಿಗೆ ಖರ್ಗೆಯವರಿಗೆ ಇಷ್ಟೇ ಕೇಳಿಕೊಳ್ಳುತ್ತೇನೆ. ಇದು ಮಾಡುವುದು ಸರಿ ರಾತ್ರಿ ಎಲ್ಲಾ ಕುಳಿತುಕೊಳ್ಳುತ್ತೇವೆ ಎಂದರೆ ನಾನೇನೂ ಹೇಳುವುದಿಲ್ಲ. ನಾನು ನಿಸ್ಸಾಹಾಯಕ. ಆದರೆ ನನ್ನ ವತಿಯಿಂದ ಇಷ್ಟು ಮಾತ್ರ ಹೇಳುತ್ತೇನೆ. ಮಾಡಿಫಿಕೇಷನ್ ಆರ್ಡರ್ ಯಾವ ಮಟ್ಟಕ್ಕೆ ಏನು ಆಗಬೇಕು ಎನ್ನುವುದನ್ನು ಹೆಚ್ಚು ಕಡಿಮೆ ಚರ್ಚೆ ಮಾಡೋಣ ಶ್ರೀಮಾನ್ ವಾಟಾಳ್ ಅವರು, ಶ್ರೀಮಾನ್ ನಂಜೇಗೌಡರು ಎಲ್ಲರೂ ಚರ್ಚೆ ಮಾಡಲಿ, ಆದರೆ ಈಗ ಇದ್ದಕ್ಕಿದ್ದ ಹಾಗೆ ನಾವು ಒಪ್ಪುವುದಿಲ್ಲ ಅಂದರೆ ಹೇಗೆ? ತಪ್ಪು ಯಾವುದು ಸರಿ ಯಾವುದು ಎಂಬುದನ್ನು ತಾವು ಯೋಚನೆ ಮಾಡಬೇಕು. ನಾನು ಈಗಲೂ ವಿನಂತಿ ಮಾಡಿಕೊಳ್ಳುತ್ತೇನೆ. ಸದನ ಕರೆಯಿರಿ, ಸದನ ಕರೆಯಿರಿ, ಮೂರು ತಿಂಗಳು ಆಯಿತು ನಾಲ್ಕು ತಿಂಗಳು ಆಯಿತು ಸದನ ಕರೆಯಲೇ ಇಲ್ಲ ಎಂದು ಹೇಳುತ್ತೀರಿ, ಆದರೆ ಸದನ ಕರೆದರೆ ಈ ರೀತಿ ಮಾಡುತ್ತೀರಿ.

ನಾವು ಇವರ ಬಗ್ಗೆ ಚರ್ಚೆ ಮಾಡುವುದಕ್ಕೆ ತಯಾರು ಇದ್ದೇವೆ. ಅಮೆಂಡ್‌ಮೆಂಟ್ ಮಾಡುವುದಕ್ಕೆ ತಯಾರು ಇದ್ದೇವೆ. ಚರ್ಚೆ ಮಾಡಿ, ಸದನದ ವೇಳೆಯನ್ನು ವ್ಯಯ ಮಾಡುವುದು ಬೇಡ. ಮಾನ್ಯ ಅಧ್ಯಕ್ಷರೆ, ನಾನು ಇನ್ನು ಹೆಚ್ಚಿಗೆ ಹೇಳಲಾರೆ ಈ ರೀತಿ ಮಾನ್ಯ ವಿರೋಧ ಪಕ್ಷದ ಸದಸ್ಯರು, ನಾಯಕರು, ನಾವು ಸದನವನ್ನು ಕಡೆಗಾಣಿಸುತ್ತಾರೆಂದು ಹೇಳುತ್ತಾರೆ. ಸದನವನ್ನು ನಾವಲ್ಲ ಕಡೆಗಾಣಿಸುವುದು, ನಾವು ಇವತ್ತು ಸ್ಕೂಲ್ ಹುಡುಗರು ಕುಳಿತುಕೊಳ್ಳುವ ಹಾಗೆ ಕುಳಿತುಕೊಂಡು ನಿಮಗೆ ಪಾಠ ಒಪ್ಪಿಸುವುದಕ್ಕೆ ತಯಾರು ಇದ್ದೇವೆ. ಆದರೆ ನೀವು ಬಂದ ತಕ್ಷಣ ಝಳಪಿಸುವ ಕತ್ತಿ ತೋರಿಸುತ್ತೀರಿ, ಹೇ! ನಾನು ಹೇಳಿದ ಹಾಗೆ ಕೇಳು, ನೀನು ಇಲ್ಲ ಅಂದರೆ ಹೊರಟು ಹೋಗು ಎಂದು ಹೇಳುತ್ತೀರಿ, ಆದರೆ ಇದೆಲ್ಲ ಪ್ರಜಾತಂತ್ರದಲ್ಲಿ ಆಗುವುದಿಲ್ಲ ದಯವಿಟ್ಟು ಈಗಲೂ ನಿಮಗೆ ವಿನಂತಿ ಮಾಡಿಕೊಳ್ಳುತ್ತೇನೆ. ಈ ರೀತಿಯ ಡಿಸ್‌ಸ್ಟ್ರಕ್ಟೀವ್ ಅಪ್ರೋಚ್ ಬೇಡ, ಇದು ಪ್ರಜಾತಂತ್ರ ಹೀಗಾದರೆ ಹೇಗೆ ನಡೆಸುವುದು? ನೀವು ಧರಣ ಮಾಡಿಕೊಂಡೇ ಇರಿ, ಆಯಿತು, ನಾವು ಅಧ್ಯಕ್ಷರಿಗೆ ಹೇಳುತ್ತೇವೆ, ಅಲ್ಲಿಗೆ ಮುಗಿದುಹೋಗುತ್ತದೆ. ಅದಕ್ಕೆ ಹೇಳುವುದು ಯಡಿಯೂರಪ್ಪನವರೆ, ಯೋಚನೆ ಮಾಡಿ, ಜನರ ಹತ್ತಿರ ಹೋಗುವುದಕ್ಕೆ ಆಗುವುದಿಲ್ಲ. ನೀವು ಬೇಕಾದರೆ ಚರ್ಚೆ ಮಾಡಿ ಕನ್‌ವಿನ್ಸ್ ಮಾಡಿ ಅದಕ್ಕೆ ನಾವು ಒಪ್ಪುತ್ತೇವೆ. ನೀವು ಏನು ಹೇಳಿದರೂ ಒಪ್ಪುವುದಿಲ್ಲ ಎಂದು ಹೇಳಿದರೆ ಆ ಮಾತು ಬೇರೆ. ನೀವು ಹೇಳಿದ ರೀಸನಬಲ್ ಪಾಯಿಂಟ್ಸ್‌ಗೆ ನಾವು ಒಪ್ಪಿಕೊಳ್ಳುತ್ತೇವೆ ಎಂದು ಹೇಳಿದರೂ ಸಹ ನಾವು ಮಾತನಾಡುವುದಿಲ್ಲ ಅಂದರೆ, ಯಾವ ಊರ ಧರ್ಮ ಇದು? ಯಾವ ರೀತಿಯ ಪ್ರಜಾಂತ್ರ ಇದು? ನಾನು ಕೆಲವು ದೇಶಗಳನ್ನು ಹಾಗೂ ಕೆಲವು ರಾಜ್ಯಗಳನ್ನೂ ನೋಡಿದ್ದೇನೆ. ಅಲ್ಲದೆ ನಾನು ಲೋಕಸಭೆಯಲ್ಲಿ ನಾಲ್ಕು ವರ್ಷ ಮೆಂಬರ್ ಆಗಿದ್ದೆ. ಆದರೆ ಈ ರೀತಿಯ ಧರಣಿ ವ್ಯವಸ್ತೆ ಇದೆಯಲ್ಲಾ ಇದು ಪರ್ಮನೆಂಟ್ ಧರಣದ ವ್ಯವಸ್ಥೆಯಾಗಿದೆ ಇಂಥದ್ದನ್ನು ಮಾತ್ರ ನಾನು ಎಲ್ಲೂ ನೋಡಲಿಲ್ಲ. ನಾವು ಇದನ್ನು ನೋಡುವುದಕ್ಕೂ ಆಗುವುದಿಲ್ಲ. ಈಗ ಇದರ ಬಗ್ಗೆ ತಮ್ಮ ತೀರ್ಮಾನಕ್ಕೆ ಬಿಟ್ಟಿದ್ದೇವೆ. ನಾನು ಇದಕ್ಕಿಂತ ಹೆಚ್ಚಿಗೆ ಏನೂ ಹೇಳಲಾರೆ, ನಮಸ್ಕಾರ.

ಅಧ್ಯಕ್ಷರು : ಈಗ ಏನು ಮಾಡೋಣ ಹೇಳಿ?

(ವಿರೋಧ ಪಕ್ಷದ ಶಾಸಕರು ಬಾವಿಯಲ್ಲಿದ್ದರು)

ನಾನು ಹಿರಿಯ ಮುಖಂಡರು ಯಾರು ಇದ್ದೀರಿ ಮತ್ತು ವಿರೋಧ ಪಕ್ಷದಲ್ಲಿರುವ ನಿಮ್ಮೆಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ನನ್ನ ಪ್ರಯತ್ನವನ್ನು ಮುಂದುವರೆಸುತ್ತೇನೆ. ಅವರು

ಒಂದು ನಿಲುವನ್ನು ತಾಳಿದ್ದಾರೆ, ಆ ನಿಲುವಿಗೆ ಬಂದು ನಿಲ್ಲಬೇಕಾದುದು ಅವರ ಕರ್ತವ್ಯ. ಅವರು ತಮ್ಮ ಕಷ್ಟ ಏನು ಇದೆ, ತಮ್ಮ ಅಭಿಪ್ರಾಯ ಏನಿದೆ, ತಮ್ಮ ಮನಸ್ಸಿನ ಅಂತರಂಗದಲ್ಲಿ ಏನಿದೆ ಆ ಮಾತನ್ನು ಅವರು ಹೇಳಿದ್ದಾರೆ. ಈಗ ಸಮಯ ಬಹಳ ಆಗಿರುವುದರಿಂದ ಆ ಕೆಲಸವನ್ನು ಈಗ ಮಾಡುವುದಕ್ಕೆ ಸಾಧ್ಯ ಇಲ್ಲ.

ಅಧ್ಯಕ್ಷರು : ಧನ್ಯವಾದಗಳು, ಈಗ ಸದನವು ಮುಕ್ತಾಯವಾಗಿ ನಾಳೆ ಬೆಳಿಗ್ಗೆ 10-00 ಗಂಟೆಗೆ ಸೇರುವುದು.

(ಸದನವು ಸಂಜೆ 5-00 ಗಂಟೆ 45 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ 31ನೇ ಜುಲೈ ಮಾಹೆ 1997ರ ಗುರುವಾರದಂದು ಬೆಳಿಗ್ಗೆ 10-00 ಗಂಟೆಗೆ ಸೇರಲು ನಿಶ್ಚಯಿಸಿತು)

+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.